# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

( ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ )


ಫೋನ್ ನಂ:08274-247088.

Email:aeegkl@gmail.com

ಸಹಾಯಕಕಾರ್ಯ ನಿರ್ವಾಹಕಇಂ(ವಿ),ರವರಕಛೇರಿ,

ಕಾರ್ಯ ಮತ್ತು ಪಾಲನೆ ಉಪ-ವಿಭಾಗ,

ಸೆಸ್ಕ್, ಗೋಣಿಕೊಪ್ಪಲು-571213.


ಸಂಖ್ಯೆ:ಜಿಕೆ:ಸಕಾಇಂ(ವಿ):ಸಇಂ(ತಾ)/ಹಿಸ/2018-19/ 5027 - 5033

ದಿನಾಂಕ: 10-01-2019.

## ಸಭಾ ನಡಾವಳಿ

ದಿನಾಂಕ: 10-01-2019 ರಂದು ಗೋಣಿಕೊಪ್ಪ ಉಪ ವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾಮರಾಜನಗರಕೊಡಗುರವರ ನೇತೃತ್ವದಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಗೋಣಿಕೊಪ್ಪ ಉಪ ವಿಭಾಗದ ವಿದ್ಯುತ್‌ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿ ನಿವೇದಿಸಿಕೊಂಡ ದೂರುಗಳು ಮತ್ತು ಅವುಗಳ ಇತ್ಯರ್ಥಕ್ಕೆಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.ಸಭೆಯಲ್ಲಿ ಹಾಜರಿದ್ದವರು.

1. ಶ್ರೀ ಉಮೇಶ್ ಬಿ. ಎಸ್, ಅಧೀಕ್ಷಕಇಂಜಿನಿಯರ್(ವಿ), ಚಾಮರಾಜನಗರಕೊಡಗು ವೃತ್ತ.
2. ಶ್ರೀ ಸೋಮಶೇಖರ್, ಕಾರ್ಯ ನಿರ್ವಾಹಕಇಂಜಿನಿಯರ್(ವಿ), ಮಡಿಕೇರಿ ವಿಭಾಗ.
3. ಶ್ರೀಮತಿ ತಾರಾ, ಕಾರ್ಯನಿರ್ವಾಹಕಇಂಜಿನಿಯರ್(ಇಂ), ಕಾರ್ಯ ಮತ್ತು ಪಾಲನೆ ವೃತ್ತಕಛೇರಿಕೊಡಗುಚಾಮರಾಜನಗರ ವೃತ್ತ, ಮೈಸೂರು.
4. ಶ್ರೀ ಪಿ. ಎನ್. ದೇವಯ್ಯ, ಸ.ಕಾ.ನಿ.ಇಂ(ವಿ),ಮಡಿಕೇರಿ ವಿಭಾಗ.
5. ಶ್ರೀ ಎಂ. ಅಂಕಯ್ಯ, ಸ.ಕಾ.ನಿ.ಇಂ(ವಿ), ಗೋಣಿಕೊಪ್ಪಲು.
6. ಶ್ರೀಓ. ಬಿ. ಗಣಪತಿ, ಕಿರಿಯ ಸಹಾಯಕ, ಗೋಣಿಕೊಪ್ಪಲು.
7. ಶ್ರೀ ಎಸ್. ಆರ್. ಕೃಷ್ಣಕುಮಾರ್, ಕಿರಿಯಇಂಜಿನಿಯರ್, ಗೋಣಿಕೊಪ್ಪಲು ಶಾಖೆ.
8. ಶ್ರೀ ಎಂ. ಇ. ವಿಜಯ ಕುಮಾರ್, ಶಾಖಾಧಿಕಾರಿ, ಶ್ರೀಮಂಗಲ ಶಾಖೆ.
9. ಶ್ರೀ ಹೆಚ್. ಜಿ. ಮನುಕುಮಾರ್, ಪ್ರಭಾರ ಶಾಖಾಧಿಕಾರಿ, ಬಾಳೆಲೆ ಶಾಖೆ.

ದಿನಾಂಕ: 10-01-2019 ರಂದು ಪಡೆದ ದೂರುಗಳ ವಿವರ:-

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡಕ್ರಮ. |
|---|---|---|---|
| 1 | ಅಣ್ಣಿರ ಟಿ. ಕಾಶಿ.<br>ಬಾಡಗರಕೇರಿ.<br>(8762014476) | ★ ಇವರ ಸ್ಥಾವರದ ಆರ್. ಆರ್. ಸಂಖ್ಯೆ BRL73 ವಿದ್ಯುತ್ ಬಿಲ್ಲಿನಲ್ಲಿ ಸಮಸ್ಯೆ ಇರುತ್ತದೆ. ಮತ್ತು ಮಾಪಕದ ರೀಡಿಂಗ್ ಜಂಪ್ ಆಗುತ್ತಿರುವ ಬಗ್ಗೆ ತಿಳಿಸಿದರು. | ★ ಶ್ರೀಮಂಗಲ ಶಾಖಾಧಿಕಾರಿ ರವರು ಮಾಪಕದ ರೀಡಿಂಗ್ ಜಂಪ್ ಆಗಿರುತ್ತದೆ. ಇದರ ಸ್ಥಳ ಪರಿಶೀಲನಾ ವರದಿಯನ್ನು ಹಿರಿಯ ಸಹಾಯಕರಿಗೆ ನೀಡಿರುವುದಾಗಿ ತಿಳಿಸಿದರು.<br>ಎಲ್. ಟಿ ರೇಟಿಂಗ್ ರವರನ್ನು ಕರೆಸಿ ಮಾಪಕವನ್ನು ಪರಿಶೀಲಿಸುವಂತೆ ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಅಧೀಕ್ಷ ಇಂಜಿನಿಯರ್ ಮತ್ತು ಕಾರ್ಯ ನಿರ್ವಾಹಕ ಇಂಜಿನಿಯರ್ ರವರು ಸೂಚಿಸಿದರು. |
| 2 | ಚೋಡುಮಾಡ ನಾಣಯ್ಯ ಮತ್ತು ಅರುಣ ಬೇಗೂರು ಗ್ರಾಮ.(9480774273) | ★ ಇವರಿಗೆ ಶ್ರೀಮಂಗಲ ಶಾಖೆಯಿಂದ ವಿದ್ಯುತ್ ಸರಬರಾಜು ಆಗುತ್ತಿದ್ದು ಮಧ್ಯದಲ್ಲಿ ಕಾಡು ಇರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತಿರುವುದರಿಂದ ಗೋಣಿಕೊಪ್ಪಲು ಶಾಖೆಯಿಂದ ಬೇಗೂರು-ಹೈಸೊಡ್ಲೂರು ಮಾರ್ಗವಾಗಿ ವಿದ್ಯುತ್ ಸಂಪರ್ಕ | ★ ಗೋಣಿಕೊಪ್ಪಲು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲನೆ ಮಾಡಿ ಮುಂದಿನ ಕ್ರಮ ವಹಿಸಲು ಅಧೀಕ್ಷ ಇಂಜಿನಿಯರ್ ಮತ್ತು ಕಾರ್ಯ ನಿರ್ವಾಹಕ ಇಂಜಿನಿಯರ್ ತಿಳಿಸಿದರು. |

| | | | |
|---|---|---|---|
| | | ನೀಡಬೇಕೆಂದು ಕೋರಿದರು. | |
| 3 | ಎಂ ಎಂ. ಮೊಣ್ಣಪ್ಪ, ಮುಗುಟಗೇರಿ,(9482903336) | ★ಪಂಪ್ ಸೆಟ್ ವಿದ್ಯುತ್ ಬಿಲ್ಲಿನಲ್ಲಿ ರಿಯಾಯಿತಿ ನೀಡಬೇಕೆಂದು ಕೇಳಿಕೊಂಡರು. | ★ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಜಕಾತಿ LT4C ಆದಲ್ಲಿ ವಿದ್ಯುತ್ ಬಿಲ್ಲು ಪಾವತಿಸಲು ಹಾಗೂ LT4A ಆಗಿದ್ದಲ್ಲಿ ವಿದ್ಯುತ್ ಬಿಲ್ಲು ಪಾವತಿ ಮಾಡಬೇಕಾಗಿರುವುದಿಲ್ಲ ಎಂದು ತಿಳಿಸಿರು. |
| 4 | ಅನುಫ್, ತಿತಿಮತಿ. | ★ತಿತಿಮತಿ ಎಕ್ಸ್‌ಪ್ರೆಸ್ ಫೀಡರ್ ಕಾಮಗಾರಿಯು ತುಂಬಾ ವಿಳಂಬವಾಗಿರುವುದರ ಬಗ್ಗೆ ಕೇಳಿದರು. | ★ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ಅವಾರ್ಡ್ ಆಗಿರುತ್ತದೆ. ಮಡಿಕೇರಿಯಲ್ಲಿ ಕಾಮಗಾರಿಯು ನಡೆಯುತ್ತಿರುವುದರಿಂದ ಇಲ್ಲಿ ಕೆಲಸ ಪ್ರಾರಂಭಮಾಡಲು ವಿಳಂಭವಾಗಿದೆ ಶೀಘ್ರವಾಗಿ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ತಿಳಿಸಿದರು. |
| 5 | ಆನಂದ್, ಕರಡಿಕೊಪ್ಪ. (9480731275) | ★ ಬೊಂಬುಕಾಡು ಮತ್ತು ಜೀನಿಹಾಡ್ಲುವಿಗೆ ಪರಿವರ್ತಕ ನೀಡಬೇಕಾಗಿ ಕೇಳಿಕೊಂಡರು.<br><br>★ ಕರಡಿಕೊಪ್ಪದಲ್ಲಿ 4 ಕಂಬಗಲು ಹಳೆಯದಾಗಿದ್ದು ಬದಲಾವಣೆ ಮಾಡಿಕೊಡಬೇಕಾಗಿ ಕೇಳಿಕೊಂಡರು. | ★ಗೋಣಿಕೊಪ್ಪಲು ಶಾಖಾಧಿಕಾರಿ ರವರ್ ಡಿ.ಡಿ.ಯು.ಜೆ. ಯೋಜನೆಯಡಿಯಲ್ಲಿ ಪರಿವರ್ತಕ ನೀಡುವುದಾಗಿ ಮತ್ತು ನಾಲ್ಕು ಕಂಬಗಳನ್ನು ಆನೆ ಕಾರಿಡಾರ್ ಯೋಜನೆಯಲ್ಲಿ ಬದಲಾವಣೆ ಮಾಡಿಕೊಡುವುದಾಗಿ ಕ್ರಮ ವಹಿಸಲು ಹಾಗೂ<br><br>ಅಧೀಕ್ಷ ಇಂಜಿನಿಯರ್(ವಿ) ರವರು ಮಾತನಾಡಿ ಆದಷ್ಟು ಬೇಗ ಪರಿವರ್ತಕವನ್ನು ಅಳವಡಿಸಿ ಕೊಡಬೇಕಾಗಿ ಮತ್ತು ಕಂಬಗಳನ್ನು ಬದಲಾವಣೆ ಮಾಡಿಕೊಡಲು ಶಾಖಾಧಿಕಾರಿ ಗೋಣಿಕೊಪ್ಪಲು ಶಾಖೆ ರವರಿಗೆ ಸೂಚಿಸಿದರು. |
| 6 | ಪಿ. ಎಂ. ಬೋಪಣ್ಣ, ಹತ್ತೂರು (9448433242) | ★ಇವರ ಮನೆಯ ಮುಂಬಾಗದಲ್ಲಿರುವ ಕಂಬವು ತುಂಬಾ ಹಳೆಯದಾಗಿದ್ದು ಬೀಳುವ ಸ್ಥಿತಿಯಲ್ಲಿರುವುದರಿಂದ ಕಂಬಗಳನ್ನು ಬದಲಾವಣೆ ಮಾಡಿಕೊಡಬೇಕೆಂದು ಕೇಳಿದರು. | ★ಗೋಣಿಕೊಪ್ಪಲು ಶಾಖಾದಿಕಾರಿಯವರು ಮಾತನಾಡಿ ಆನೆ ಕಾರಿಡಾರ್ ಯೋಜನೆಯಲ್ಲಿ ಕಂಬವನ್ನು ಬದಲಾಯಿಸಿ ಕೊಡುತ್ತೇವೆ ಎಂದು ತಿಳಿಸಿದರು. ಅಧೀಕ್ಷಕ ಇಂಜಿನಿಯರ್ ರವ ಶೀಘ್ರವಾಗಿ ಬದಲಾಯಿಸಿ ಕೊಡಲು ಗೋಣಿಕೊಪ್ಪಲು ಶಾಖಾಧಿಕಾರಿ ರವರಿಗೆ ಸೂಚಿಸಿದರು. |
| 7 | ಕೆ. ಕೆ. ವಿಷ್ಣು, ಕುರ್ಚಿ (9845310491) | ★ಐ.ಪಿ. ಸೆಟ್ ಸ್ಥಾವರಕ್ಕೆ ಅಕ್ರಮ-ಸಕ್ರಮ ಯೋಜನೆಯಲ್ಲಿ ಸರ್ವಿಸ್ ಆಗಿದ್ದು ಪರಿವರ್ತಕ ನೀಡಬೇಕಾಗಿ ಕೇಳಿಕೊಂಡಿರುತ್ತಾರೆ. | ★ಶ್ರೀಮಂಗಲ ಶಾಖಾಧಿಕಾರಿಯವರು ಮಾತನಾಡಿ ಇವರು ತ್ವರಿತ ವಿದ್ಯುತ್ ಯೋಜನೆಯಲ್ಲಿ ಪರಿವರ್ತಕಕ್ಕೆ ಅರ್ಜಿ ಸಲ್ಲಿಸಿರುತ್ತಾರೆ ಎಂದು ತಿಳಿಸಿದರು. ಅದಕ್ಕೆ ಅಧೀಕ್ಷಕ ಅಭಿಯಂತರರು ಮಾತನಾಡಿ ಎಲ್. ಟಿ. ಮತ್ತು ಹೆಚ್. ಟಿ ಕಾಮಗಾರಿಯು ಪೂರ್ಣಗೊಂಡ ನಂತರ ಪರಿವರ್ತಕವನ್ನು ಇಲಾಖೆಯಿಂದ ಒದಗಿಸುವುದಾಗಿ ತಿಳಿಸಿದರು. |

| | | | |
|---|---|---|---|
| 8 | ಕೆ. ಯು. ಸದಾಶಿವ ಮತ್ತು ದರ್ಶನ್, ಬಲ್ಯಮಂಡೂರು (9740508072) (9448194186) | ★ಗ್ರಾಮದಲ್ಲಿ ತುಂಬಾ ಓಲ್ಟೇಜ್ ಸಮಸ್ಯೆ ಇರುವುದರಿಂದ ಹೊಸ ಪರಿವರ್ತಕವನ್ನು ಅಳವಡಿಸಿ ಕೊಡಬೇಕಾಗಿ ಕೇಳಿಕೊಂಡರು. | ★ಬಾಳೆಲೆ ಶಾಖಾಧಿಕಾರಿ ರವರಿಗೆ ಸ್ಥಳ ಪರಿಶೀಲಿಸಿ E & I ಕಾಮಗಾರಿಯಲ್ಲಿ ಪರಿವರ್ತಕವನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲು ಅಧೀಕ್ಷ ಇಂಜಿನಿಯರ್ ರವರು ರವರರಿಗೆ ಸೂಚಿಸಿದರು. |
| 9 | ಎಸ್. ಎಂ. ಕುಶಾಲಪ್ಪ, ದೇವರಪುರ (9008730478) | ★ಸ್ಥಾವರದ ಆರ್. ಆರ್. ಸಂಖ್ಯೆ: GKGL34322, GKGL30834, GKGL38459, GKGL38606 ಮಾಪಕ ರೀಡಿಂಗ್ ನಲ್ಲಿ ವ್ಯತ್ಯಾಸ ವಾಗಿದ್ದು ವಿದ್ಯುತ್ ಬಿಲ್ಲು ಅಧಿಕವಾಗಿ ಬರುತ್ತಿರುವುದರಿಂದ ಇದನ್ನು ಸರಿಪಡಿಸಬೇಕಾಗಿ ಕೋರಿದರು. | ★ ಅಧೀಕ್ಷಕ ಅಭಿಯಂತರರು ಮಾತನಾಡಿ ಗೋಣಿಕೊಪ್ಪಲು ಶಾಖಾಧಿಕಾರಿ ರವರಿಗೆ ಖುದ್ದಾಗಿ ಸ್ಥಳಕ್ಕೆ ಭೇಟಿನೀಡಿ ರೀಡಿಂಗ್ ಪರಿಶೀಲಿಸಿ ಬಿಲ್ಲನ್ನು ಸರಿಪಡಿಸಬೇಕಾಗಿ ಸೂಚಿಸಿದರು. |
| 10 | ಅಯ್ಯಪ್ಪ ಬಲ್ಯಮಂಡೂರು, (9483928633) | ★ಶ್ರೀಮಂಗಲ ಲೈನ್ ನಿಂದ ವಿದ್ಯುತ್ ಸರಬರಾಜು ಆಗುತ್ತಿದ್ದು ಪೊನ್ನಂಪೇಟೆ ಲೈನ್‌ಗೆ ಲಿಂಕ್ ಮಾಡಿಕೊಡಬೇಕಾಗಿ ಕೇಳಿದರು.<br><br>★ಇವರ ಐ.ಪಿ. ಸೆಟ್ ಗೆ LT4A ಜಕಾತಿಯಲ್ಲಿ ವಿದ್ಯುತ್ ಸಂಪರ್ಕ ಪಡೆದಿದ್ದು ಈಗ ಜಕಾತಿಯು LT4C ಆಗಿರುತ್ತದೆ. ಇದನ್ನು ಸರಿಪಡಿಸಬೇಕಾಗಿ ಕೇಳಿದರು. | ★ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಗೋಣಿಕೊಪ್ಪಲು ಶಾಖಾಧಿಕಾರಿಯವರು ಸ್ಥಳ ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಹೇಳಿದರು.<br><br>ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಶಾಖಾಧಿಕಾರಿ ರವರು ಸ್ಥಳ ಪರಿಶೀಲನೆ ಮಾಡಿ ಸ್ಥಳ ಪರಿಶೀಲನಾ ವರದಿ ಮತ್ತು ಆರ್. ಟಿ. ಸಿ ಯನ್ನು ನೀಡಬೇಕು ನಂತರ ಜಕಾತಿಯನ್ನು ಬದಲಾವಣೆ ಮಾಡಬಹುದೆಂದು ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 11 | ಚಿಮ್ಮಂಗಡ ಗಣೇಶ್ ನಾಲ್ಕೇರಿ ಗ್ರಾಮ. (9481192004) | ★ದೊರೆ ಪರಿವರ್ತಕಕ್ಕೆ E & I ಕಾಮಗಾರಿಯಲ್ಲಿ ಪರಿವರ್ತಕವನ್ನು ಅಳವಡಿಸಬೇಕೆಂಧು ಕೇಳಿದರು.<br><br>★11 ಕೆ. ವಿ. ಮಾರ್ಗವು ತೋಟದ ಮಧ್ಯದಲ್ಲಿ ಹಾದು ಹೋಗಿದ್ದು ರಸ್ತೆ ಬದಿಗೆ ಸ್ಥಳಾಂತರ ಮಾಡಿಕೊಡಬೇಕಾಗಿ ಕೋರಿದರು. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಸ್ಥಳ ಪರಿಶೀಲನೆ ಮಾಡಿ E & I ಕಾಮಗಾರಿಯಲ್ಲಿ ಪರಿವರ್ತಕ ಅಳವಡಿಸಬೇಕಾಗಿ ಹಾಗೂ 11 ಕಿ. ವಿ. ಮಾರ್ಗವನ್ನು ಸ್ಥಳಾಂತರ ಮಾಡಲು ಸ್ವಯಂ ನಿರ್ವಹಣೆಯಲ್ಲಿ ಅಂದಾಜು ಪಟ್ಟಿ ತಯಾರಿಸಲು ಶ್ರೀಮಂಗಲ ಶಾಖಾಧಿಕಾರಿ ರವರಿಗೆ ಸೂಚಿಸಿದರು. |
| 12 | ಪೂವಪ್ಪ ಕೆ. ಬಾಡಗ, (9483397990) | ★ಗದ್ದೆಯಲ್ಲಿ ಹಾದು ಹೋಗಿರುವ 11 ಕೆ. ವಿ. ಮಾರ್ಗದ ಕಂಬವು ಮುರಿದು ಬೀಳುವ ಸ್ಥಿತಿಯಲ್ಲಿರುತ್ತದೆ ಮತ್ತು 11 ಕೆ. ವಿ. ಲೈನ್ ತುಂಬಾ ಕೆಳಗೆ ಇರುತ್ತದೆ ಆದ್ದರಿಂದ ೩ ಕಂಬಗಳನ್ನು ಸ್ಥಳಾಂತರ ಮಾಡಿಕೊಡಬೇಕಾಗಿ ಕೋರಿದರು.<br><br>★ ಕೃಷ್ಣ ಮಾರ್ಗದಾಳು ಇವರು ಸಂಜೆ ಕ್ಯಾಂಪ್‌ನಲ್ಲಿ ವಾಸವಿರುವುದಿಲ್ಲ ವೆಂದು ದೂರಿದರು. ಇವರು ವಾಸವಿಲ್ಲದ ಕಾರಣ ಬೇರೆಕಡೆಗೆ ವರ್ಗಾವಣೆ ಮಾಡುವಂತೆ ಕೋರಿರುತ್ತಾರೆ. | ★ಅಧೀಕ್ಷ ಇಂಜಿನಿಯರ್ ರವರು ಶೀಘ್ರವಾಗಿ ಸ್ಥಳಪರಿಶೀಲನೆ ಮಾಡುವಂತೆ ಮತ್ತು ಮಧ್ಯಂತರ ಕಂಬಗಳನ್ನು ಅಳವಡಿಸುವಂತೆ ಸಹಾಯಕ ಕಾರ್ಯನಿರ್ವಾಕ ಇಂಜಿನಿಯರ್ ಮತ್ತು ಶ್ರೀಮಂಗಲ ಶಾಖಾಧಿಕಾರಿ ರವರಿಗೆ ಸೂಚಿಸಿದರು.<br><br>★ಕೃಷ್ಣ ಮಾರ್ಗದಾಳು ರವರನ್ನು ಕ್ಯಾಂಪ್ ನಲ್ಲಿ ವಾಸ್ತವ್ಯ ಹೂಡಲು ಕ್ರಮಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರತವರಿಗೆ ತಿಳಿಸಿದರು. |

| | | | |
|---|---|---|---|
| 13 | ಮುತ್ತಣ್ಣ, ಬಾಳೆಲೆ ನಿಟ್ಟೂರು. (9448954384) | ದೈನಂದಿನ ಕೆಲಸ ಕಾರ್ಯಗಳಿಗೆ ತುಂಬಾ ತೊಂದರೆ ಆಗುತ್ತಿದ್ದು ಈ ಬಗ್ಗೆ ನಮಗೆ ಸರಿಯಾದ ಮಾಹಿತಿ ಇಲಾಖೆಯಿಂದ ಸಿಗದಿದ್ದ ಕಾರಣ ಈ ಸಮಸ್ಯೆಯನ್ನು ಸರಿಪಡಿಸಿ ಕೊಡಬೇಕಾಗಿ ಕೋರಿದರು. | ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಮಾತನಾಡಿ ಬಾಳೆಲೆ ಎಕ್ಸ್‌ಪ್ರೆಸ್ ಫೀಡರ್ ಕಾಮಗಾರಿ ನಡೆಯುತ್ತಿರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗಿದೆ ಎಂದು ತಿಳಿಸಿದರು. ನಂತರ ಗ್ರಾಹಕರ ಆರ್. ಆರ್. ಸಂಖ್ಯೆಗೆ ತಮ್ಮ ಮೊಬೈಲ್ ಸಂಖ್ಯೆ ದಾಖಲಾಗಿದ್ದಲ್ಲಿ ತಮಗೆ ಮುಂಚಿತವಾಗಿ ವಿದ್ಯುತ್ ಕಡಿತದ ಮಾಹಿತಿ ಊರ್ಜ ಮಿತ್ರದಲ್ಲಿ ಲಭ್ಯವಿರುತ್ತದೆ. ಎಂದು ತಿಳಿಸಿದರು. |
| 14 | ಅಣ್ಣಯ ಮತ್ತು ಕೃಷ್ಣ, ಪೊನ್ನಪ್ಪ ನಡಾವಣೆ, ಪೊನ್ನಂಪೇಟೆ. (9611303990) | ★DDUJ ಯೋಜನೆಯಲ್ಲಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಿದ್ದು ಇನ್ನು ಸಹ ಚಾಲನೆ ಗೊಂಡಿರುವುದಿಲ್ಲ ಎಂದು ತಿಳಿಸಿದರು. | ★ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ವಿದ್ಯುತ್ ಪರಿವೀಕ್ಷಕರಿಗೆ ಮಾತನಾಡಿ ವಿದ್ಯುತ್ ಪರಿವರ್ತಕವನ್ನು ಚಾಲನೆ ಮಾಡಲು ಗೋಣಿಕೊಪ್ಪಲು ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 15 | ನೂರೇರ ಡಾಲಿ, ಬೆಳ್ಳೂರು. | ★ತೋಟದಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸುವಂತೆ ಹಾಗೂ ಮಾರ್ಗದಾಳುಗಳಾದ ರವಿ ಹಾಗೂ ಕೃಷ್ಣ ಶ್ರೀಮಂಗಲ ಶಾಖೆ ಇವರುಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಬೇಕೆಂದು ಕೇಳಿಕೊಂಡರು | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಶ್ರೀಮಂಗಲ ಶಾಖಾಧಿಕಾರಿರವರಿಗೆ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸದರು.<br><br>ಮಾರ್ಗದಾಳುಗಳಾದ ರವಿ ಮತ್ತು ಕೃಷ್ಣ ರವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರಿಗೆ ಸೂಚಿಸಿದರು. |
| 16 | ಎಂ. ಎಂ. ಸುಬ್ಬಯ್ಯ, ತಾವಳಗೇರಿ. (8105391171) | ★ಇವರ ಕಾಫಿ ತೋಟದಲ್ಲಿ ವಿದ್ಯುತ್ ಮಾರ್ಗದ ವೈರ್ ಗಳು ತುಂಬಾ ಕೆಳಗೆ ಜೋತು ಬಿದ್ದಿರುತ್ತದೆ ಎಂದು ತಿಳಿಸಿದರು. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಧ್ಯಂತರ ಕಂಬಗಳನ್ನು ಅಳವಡಿಸಲು ಶ್ರೀಮಂಗಲ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 17 | ಸಿ. ಟಿ. ಕುಟ್ಟಪ್ಪ, ಕಿರುಗೂರು. (9482021945) | ★ ಕಿರುಗೂರು ಗ್ರಾಮದಿಂದ ಹಾದು ಹೋಗಿರುವ ಬಾಳೆಲೆ ಲೈನ್ ಆಗಾಗ ವಿದ್ಯುತ್ ವ್ಯತ್ಯಯ ವಾಗುತ್ತಿದ್ದು ಕಿರುಗೂರು ಗ್ರಾಮದಲ್ಲಿ ಕರೆಂಟ್ ಇರುವುದಿಲ್ಲ ಆದೂದರಿಂದ ಕಿರುಗೂರಿನ ವರೆಗೆ ಜಿ.ಓ.ಎಸ್. ಮತ್ತು ಡಿ.ಓ.ಎಲ್.ಓ ಗಳನ್ನು ಅಳವಡಿಸಲು ಕೇಳಿಕೊಂಡರು. | ★ಅಧೀಕ್ಷಕ ಇಂಜಿನಿಯರ್(ವಿ), ರವರು ಸ್ಥ ಪರಿಶೀಲನೆ ಮಾಡಲು ಗೋಣಿಕೊಪ್ಪಲು ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 18 | ಪ್ರದೀಪ್ ಮತ್ತು ಶ್ರೀನಿವಾಸ್, ಮಾಯಮುಡಿ.(9481858910) | ★ಮಠ ಟಿ.ಸಿ.ಗೆ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿ ಕೊಡಲು ಕೋರಿದರು. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಅವಶ್ಯಕತೆ ಇದ್ದಲ್ಲಿ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ತಯಾರಿ ಮಾಡಿಕೊಡುವಂತೆ ಗೋಣಿಕೊಪ್ಪಲು ಶಾಖಾಧಿಕಾರಿ ರವರಿಗೆ ಸೂಚಿಸಿದರು. |
| 19 | ಕೃಷ್ಣಮೂರ್ತಿ, ಕಳತ್‌ಮಾಡು. (9449763289) | ★ಕಳತ್ಮಾಡು ಟಿ.ಸಿ.ಗೆ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿ ಕೊಡಲು ಕೋರಿದರು. | ★ಗೋಣಿಕೊಪ್ಪಲು ಶಖಾಧಿಕಾರಿಯವರು ಮಾತನಾಡಿ ವಿಭಾಗ ಕಛೇರಿಗೆ ಅಂದಾಜು ಪಟ್ಟಿಯನ್ನು ಕಳುಹಿಸಿ ಕೊಟ್ಟಿದ್ದೇವೆ ಎಂದು |

| | | | |
|---|---|---|---|
| | | | ತಿಳಿಸಿದರು. |
| 20 | ಚಿಮ್ಮಂಗಡ ಗಣೇಶ್, ನಾಲ್ಕೇರಿ.(9481192004). | ★ಶ್ರೀಮಂಗಲ ಶಾಖಾ ಕಛೇರಿಗೆ ಹತ್ತಿರ ವಿರುವ ವಸತಿ ಗೃಹಗಳು ನಿಮ್ಮ ಇಲಾಖೆ ಸೇರಿದೆಯೇ ಎಂದು ಕೇಳಿದರು.<br><br>★ಶ್ರೀಮಂಗಲ ಶಾಖಾ ವ್ಯಾಪ್ತಿಯು ತುಂಬಾ ದೊಡ್ಡದಾಗಿದ್ದು ಶ್ರೀಮಂಗಲ ಶಾಖೆಗೆ ಒಂದು ಖಾಯಂ ಜೀಪು ನೀಡಬೇಕೆಂದು ತಿಳಿಸಿದರು. | ★ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ಆ ವಸತಿ ಗೃಹಗಳು ನಮ್ಮ ಇಲಾಖೆಗೆ ಸೇರಿರುವುದಿಲ್ಲ ಅದು ಲೋಕೋಪಯೋಗಿ ಇಲಾಖೆಯ ವಸತಿ ಗೃಹ ಎಂದು ತಿಳಿಸಿದರು.<br><br>★ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಶ್ರೀಮಂಗಲ . ಬಾಳೆಲೆ ಗೋಣಿಕೊಪ್ಪಲು ಶಾಖೆಗಳಿಗೆ ಜೀಪ್ ಅವಶ್ಯಕತೆ ಇರುವ ಬಗ್ಗೆ ವಿಭಾಗ ಕಛೇರಿಗೆ ಪತ್ರ ಬರೆಯುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಸೂಚಿಸಿದರು. |

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಲವಿಭಾಗ
ಸೆಸ್ಕ್ ಮಡಿಕೇರಿ.

ಪ್ರತಿಯನ್ನು

1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾ.ವಿ.ಸ.ನಿ.ನಿ.,ಮೈಸೂರು ರವರ ಅವಗಹನೆಗಾಗಿ ಸಲ್ಲಿಸಲಾಗಿದೆ
2. .ಪ್ರಧಾನ ವ್ಯವಸ್ಥಾಪಕರು(ವಾ) ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು. ರವರ ಅವಗಹನೆಗಾಗಿ ಸಲ್ಲಿಸಲಾಗಿದೆ
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯ ನಿರ್ವಾಹಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಅಧೀಕ್ಷಕ ಇಂಜಿನಿಯರ್(ವಿ),ಸೆಸ್ಕ್ ಕಾ ಮತ್ತು ಪಾ ವೃತ್ತ, ಕೊಡಗು- ಚಾಮರಾಜನಗರ ಮೈಸೂರು. ರವರ ಅವಗಹನೆಗಾಗಿ ಸಲ್ಲಿಸಲಾಗಿದೆ
5. ನಿರ್ದೇಶಕರು(ತಾ) ರವರ ತಾಂತ್ರಿಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
6. ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನೆ ಉಪವಿಭಾಗ, ಚಾ.ವಿ.ಸ.ನಿ.ನಿ, ಕುಶಾಲನಗರ.
7. ಕಚೇರಿ ಪ್ರತಿ.